# www.karunaduexams.com

## ಸಾಮಾನ್ಯ ಜ್ಞಾನ ಮತ್ತು ಪ್ರಚಲಿತ ವಿದ್ಯಮಾನ ಕ್ವಿಜ್- ಸೆಪ್ಟೆಂಬರ್ 27, 2016

www.karunaduexams.com

# ಸಾಮಾನ್ಯ ಜ್ಞಾನ ಮತ್ತು ಪ್ರಚಲಿತ ವಿದ್ಯಮಾನ ಕ್ವಿಜ್- ಸೆಪ್ಟೆಂಬರ್ 27, 2016

1. ಇತ್ತೀಚೆಗೆ ಬಿಡುಗಡೆಗೊಂಡ "ಜಾಗತಿಕ ಸ್ಪರ್ಧಾತ್ಮಕ ಸೂಚ್ಯಂಕ (Global Competitive Index)"ದಲ್ಲಿ ಭಾರತ ಎಷ್ಟನೇ ಸ್ಥಾನಗಳಿಸಿದೆ?

ಅ) 45

ಆ) 39

ಇ) 60

ಈ) 73

39

ವಿಶ್ವ ಆರ್ಥಿಕ ವೇದಿಕೆ (WEF) ಬಿಡುಗಡೆ ಮಾಡಿದ ಜಾಗತಿಕ ಸ್ಪರ್ಧಾತ್ಮಕ ಸೂಚ್ಯಂಕದಲ್ಲಿ ಭಾರತ 39ನೇ ಸ್ಥಾನವನ್ನು ಪಡೆದುಕೊಂಡಿದೆ. ಕಳೆದ ಸೂಚ್ಯಂಕದಲ್ಲಿ ಭಾರತ 55ನೇ ಸ್ಥಾನದಲ್ಲಿತ್ತು. ಈ ಬಾರಿ 16 ಸ್ಥಾನಗಳ ಏರಿಕೆ ಕಂಡಿದೆ. ಬ್ರಿಕ್ಸ್ ರಾಷ್ಟ್ರಗಳಲ್ಲಿ ಭಾರತ, ಚೀನಾ ನಂತರ ಎರಡನೇ ಅತಿ ಹೆಚ್ಚು ಸ್ಪರ್ಧೆ ಒಡ್ಡುವ ದೇಶವಾಗಿದೆ. ಚೀನಾಕ್ಕೆ ವಿಶ್ವ ಆರ್ಥಿಕ ಸೂಚ್ಯಂಕದಲ್ಲಿ 28ನೇ ಸ್ಥಾನವಿದೆ. ಸತತ 8ನೇ ಅವಧಿಗೆ ಸ್ವಿರ್ಜರ್ಲೆಂಡ್ ಮೊದಲ ಸ್ಥಾನದಲ್ಲಿದ್ದು ಸಿಂಗಾಪೂರ ಮತ್ತು ಅಮೆರಿಕಾ ಎರಡು ಹಾಗೂ ಮೂರನೇ ಸ್ಥಾನದಲ್ಲಿದೆ. ಸೂಚ್ಯಂಕದಲ್ಲಿ ಭಾರತ 4.52ರಲ್ಲಿದ್ದರೆ, ಸ್ವಿಜರ್ಲೆಂಡ್ ನ ಸೂಚ್ಯಂಕ 5.81ರಷ್ಟಿದೆ. ದಕ್ಷಿಣ ಏಷ್ಯಾ ರಾಷ್ಟ್ರಗಳ ಪೈಕಿ ಭಾರತ ಮೊದಲ ಸ್ಥಾನದಲ್ಲಿದ್ದರೆ, ನಂತರದ ಸ್ಥಾನದಲ್ಲಿ ಶ್ರೀಲಂಕಾ (71), ಭೂತಾನ್ (97) ಮತ್ತು ನೇಪಾಳ (98) ಇದೆ. ಪಾಕಿಸ್ತಾನ 122ನೇ ಸ್ಥಾನದಲ್ಲಿದೆ.

2. ಯಾವ ದೇಶದಲ್ಲಿ ಮೊಟ್ಟ ಮೊದಲ "ಬ್ರಿಕ್ಸ್ ಯುವ ವಿಜ್ಞಾನಿಗಳ ಸಮಾವೇಶ-2016" ಇತ್ತೀಚೆಗೆ ಆರಂಭಗೊಂಡಿತು?

ಅ) ಭಾರತ

ಆ) ಬ್ರೆಜಿಲ್

ಇ) ಚೀನಾ

ಈ) ದಕ್ಷಿಣ ಆಫ್ರಿಕಾ

ಭಾರತ

ಮೊಟ್ಟ ಮೊದಲ ಬ್ರಿಕ್ಸ್ ಯುವ ವಿಜ್ಞಾನಿಗಳ ಸಮಾವೇಶ ಬೆಂಗಳೂರಿನಲ್ಲಿ ಸೆಪ್ಟೆಂಬರ್ 26 ರಂದು ಆರಂಭಗೊಂಡಿದೆ. ಸೆಪ್ಟೆಂಬರ್ 30 ರವರೆಗೆ ನಡೆಯಲಿರುವ ಸಮಾವೇಶದಲ್ಲಿ ಬ್ರಿಕ್ಸ್ ರಾಷ್ಟ್ರಗಳ ಅನೇಕ ಯುವ ವಿಜ್ಞಾನಿಗಳು ಭಾಗವಹಿಸಲಿದ್ದಾರೆ. ಬ್ರಿಕ್ಸ್ ರಾಷ್ಟ್ರಗಳು ಎದುರಿಸುತ್ತಿರುವ ಸಾಮಾನ್ಯ ಸವಾಲುಗಳು ಮತ್ತು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಈ ಸಮಾವೇಶ ವೇದಿಕೆಯಾಗಲಿದೆ. ಗಣಕ ಬುದ್ದಿಮತ್ತೆ, ಇಂಧನ ಪರಿಹಾರ ಮತ್ತು ಕೈಗೆಟಕುವ ಆರೋಗ್ಯಸೇವೆ ಈ ಮೂರು ವಿಷಯಗಳ ಮೇಲೆ ಸಮಾವೇಶದಲ್ಲಿ ಮುಖ್ಯವಾಗಿ ಚರ್ಚಿಸಲಾಗುವುದು.

3. ರಾಷ್ಟ್ರೀಯ ವಿಪತ್ತು ನಿರ್ವಹಣೆ ಪಡೆ (National Disaster Response Force)ಯ ನೂತನ ಜನರಲ್ ಡೈರಕ್ಟರ್ ____?

ಅ) ಜೋಸೆಫ್ ಗರ್ಗ್

www.karunaduexams.com

ಆ) ಮಹಮ್ಮದ್ ಸೈಯದ್

ಇ) ಆರ್ ಕೆ ಪಚ್ನಂದ

ಈ) ಗೌತಮ್ ಚಂದ್ರ

ಆರ್ ಕೆ ಪಚ್ನಂದ

1983ನೇ ತಂಡದ ಹಿರಿಯ ಐಪಿಎಸ್ ಅಧಿಕಾರಿ ಆರ್ ಕೆ ಪಚ್ನಂದ ಅವರು ರಾಷ್ಟ್ರೀಯ ವಿಪತ್ತು ನಿರ್ವಹಣೆ ಪಡೆಯ ನೂತನ ಜನರಲ್ ಡೈರಕ್ಟರ್ ಆಗಿ ನೇಮಕಗೊಂಡಿದ್ದಾರೆ. ಪ್ರಸ್ತುತ ಇವರು ಕೇಂದ್ರ ಕೈಗಾರಿಕಾ ಭದ್ರತೆ ಪಡೆಯ ಅಡಿಷನಲ್ ಡೈರೆಕ್ಟರ್ ಜನರಲ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

4. 2016 ವಿಶ್ವ ಪ್ರವಾಸೋದ್ಯಮ ದಿನದ ಧ್ಯೇಯವಾಕ್ಯ ______?

ಅ) Tourism for all – promoting universal accessibility

ಆ) Tourism for Better Country

ಇ) Tourism, Tourist and Good Environment

ಈ) One World Many Places

Tourism for all – promoting universal accessibility

ವಿಶ್ವ ಪ್ರವಾಸೋದ್ಯಮ ದಿನವನ್ನು ಸೆಪ್ಟೆಂಬರ್ 27ರಂದು ಪ್ರತಿ ವರ್ಷ ಆಚರಿಸಲಾಗುತ್ತಿದೆ. Tourism for all – promoting universal accessibility ಇದು ಈ ವರ್ಷದ ಧ್ಯೇಯವಾಕ್ಯ.

5. ಮಹಾರಾಷ್ಟ್ರ ಸರ್ಕಾರ ನೀಡುವ ಪ್ರತಿಷ್ಠಿತ "ಲತಾ ಮಂಗೇಶ್ಕರ್ ಜೀವಮಾನ ಸಾಧನೆ ಪ್ರಶಸ್ತಿ"ಗೆ ಈ ವರ್ಷ ಯಾರನ್ನು ಆಯ್ಕೆಮಾಡಲಾಗಿದೆ?

ಅ) ಉತ್ತಮ್ ಸಿಂಗ್

ಆ) ಶಾರೂಖ್ ಖಾನ್

ಇ) ಅಕ್ಷಯ್ ಕುಮಾರ್

ಈ) ಜಯಾ ಬಚ್ಚನ್

ಉತ್ತಮ್ ಸಿಂಗ್

ಹಿರಿಯ ಸಂಗೀತಾ ನಿರ್ದೇಶಕ ಹಾಗೂ ವಯಲಿನ್ ಮಾಂತ್ರಿಕ ಉತ್ತಮ್ ಸಿಂಗ್ ಅವರನ್ನು ಈ ವರ್ಷದ ಲತಾ ಮಂಗೇಶ್ಕರ್ ಜೀವಮಾನ ಸಾಧನೆ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಲತಾ ಮಂಗೇಶ್ಕರ್ ಅವರ 86ನೇ ಜನ್ಮದಿನದ ಅಂಗವಾಗಿ ಪ್ರಶಸ್ತಿಯನ್ನು ಪ್ರಕಟಿಸಲಾಗಿದೆ. ಪ್ರಶಸ್ತಿಯು 5 ಲಕ್ಷ ನಗದು, ಟ್ರೋಫಿ ಹಾಗೂ ಫಲಕವನ್ನು ಒಳಗೊಂಡಿದೆ.

www.karunaduexams.com

ಲತಾ ಮಂಗೇಶ್ಕರ್ ಜೀವಮಾನ ಸಾಧನೆ ಪ್ರಶಸ್ತಿಯನ್ನು ಮಹಾರಾಷ್ಟ್ರ ಸರ್ಕಾರ 1992ರಲ್ಲಿ ಸ್ಥಾಪಿಸಿದ್ದು, ಪ್ರತಿವರ್ಷ ನೀಡಲಾಗುತ್ತಿದೆ.

6. ಇತ್ತೀಚೆಗೆ ನಿಧನರಾದ ನೊಬೆಲ್ ಪ್ರಶಸ್ತಿ ಪುರಸ್ಕೃತ "ಶಿಮಾನ್ ಪೆರೆಸ್" ಯಾವ ದೇಶದ ಮಾಜಿ ಅಧ್ಯಕ್ಷರು?

ಅ) ಇಟಲಿ

ಆ) ಸೂಡಾನ್

ಇ) ಇಸ್ರೇಲ್

ಈ) ಜಪಾನ್

ಇಸ್ರೇಲ್

ಇಸ್ರೇಲ್ ಮಾಜಿ ಅಧ್ಯಕ್ಷ ಹಾಗೂ ನೊಬೆಲ್ ಪ್ರಶಸ್ತಿ ಪುರಸ್ಕೃತ ಶಿಮಾನ್ ಪೆರೆಸ್ ಅವರು ಪಾರ್ಶ್ವವಾಯುವಿಗೆ ತುತ್ತಾಗಿ ವಿಧಿವಶರಾದರು. ಪೆರೆಸ್ ಅವರು 2007ರಿಂದ 2014ರವರೆಗೆ ಎರಡು ಬಾರಿ ಇಸ್ರೇಲ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಇದಕ್ಕೂ ಮೊದಲು 1994ರಲ್ಲಿ ಓಸ್ಲೋ ಒಪ್ಪಂದ ಹಾಗೂ ಸ್ವತಂತ್ರ್ಯ ಪ್ಯಾಲೆಸ್ತೀನ್ ಸಂಧಾನದಲ್ಲಿ ಮಹತ್ತರ ಪಾತ್ರವಹಿಸಿದ್ದಕ್ಕಾಗಿ ನೊಬೆಲ್ ಪ್ರಶಸ್ತಿಯನ್ನು ಪೆರೆಸ್ ಪಡೆದುಕೊಂಡಿದ್ದರು. ಪೆರೆಸ್ ರೊಂದಿಗೆ ಪ್ರಧಾನಿ ಯಿಟ್ಜಾಕ್ ರಬಿನ್ ಹಾಗೂ ಪ್ಯಾಲೆಸ್ತೀನಿ ನಾಯಕ ಯಾಸರ್ ಅರಾಫತ್ ಕೂಡ ಜಂಟಿ ನೊಬೆಲ್ ಶಾಂತಿ ಪ್ರಶಸ್ತಿಗೆ ಭಾಜನರಾಗಿದ್ದರು.

7. ಈ ಕೆಳಗಿನ ಯಾವ ವರ್ಷ ಭಾರತವು ಪಾಕಿಸ್ತಾನಕ್ಕೆ "ಪರಮಾಪ್ತ ರಾಷ್ಟ್ರ ಸ್ಥಾನ (Most Favored Nation)"ವನ್ನು ನೀಡಿತು?

ಅ) 2002

ಆ) 1996

ಇ) 1998

ಈ) 1975

1996

1996 ರಲ್ಲಿ ಭಾರತ ಪಾಕಿಸ್ತಾನಕ್ಕೆ ಪರಮಾಪ್ತ ರಾಷ್ಟ್ರ ಸ್ಥಾನಮಾನವನ್ನು ನೀಡಿದೆ. ಈ ಸ್ಥಾನಮಾನವನ್ನು ವಿಶ್ವ ವ್ಯಾಪಾರ ಸಂಸ್ಥೆಯ GATT (General Agreement of Tariff and Trade) ಒಪ್ಪಂದದಡಿ ನೀಡಲಾಗಿದೆ. ಇತ್ತೀಚೆಗೆ ಉರಿ ಸೇನಾ ನೆಲದ ಮೇಲೆ ಪಾಕ್ ಪ್ರೇರೆಪಿತ ಭಯೋತ್ಪಾದಕರು ನಡೆಸಿದ ದಾಳಿಯ ಹಿನ್ನಲೆಯಲ್ಲಿ ಪಾಕಿಸ್ತಾನಕ್ಕೆ ನೀಡಿರುವ ಈ ಸ್ಥಾನಮಾನವನ್ನು ಹಿಂಪಡೆಯಲು ಭಾರತ ಚಿಂತಿಸುತ್ತಿದೆ.

8. ಟ್ರಾಂಬೆ, ನಂಗಲ್ ಮತ್ತು ಸಿಂದ್ರಿ ಇದಕ್ಕೆ ಪ್ರಸಿದ್ದಿಯಾಗಿವೆ _____?

ಅ) ರಸಗೊಬ್ಬರ

ಆ) ಗಾಜು

www.karunaduexams.com

ಇ) ಜವಳಿ

ಈ) ಕಲ್ಲಿದ್ದಲು

ಟ್ರಾಂಬೆ, ನಂಗಲ್ ಮತ್ತು ಸಿಂದ್ರಿ ನಗರಗಳು ರಸಗೊಬ್ಬರ ತಯಾರಿಕೆ ಪ್ರಸಿದ್ದಿ ಹೊಂದಿವೆ.

9. ಈ ಕೆಳಗಿನ ಯಾವ ವಿಮಾನ ನಿಲ್ದಾಣ ಏಷ್ಯಾ-ಫೆಸಿಫಿಕ್ ವಲಯದಲ್ಲಿ "ಇಂಗಾಲ ತಟಸ್ಥ (Carbon Neutral)"ವಿಮಾನ ನಿಲ್ದಾಣವೆಂಬ ಗೌರವಕ್ಕೆ ಪಾತ್ರವಾದ ಮೊದಲ ನಿಲ್ದಾಣವಾಗಿದೆ?

ಅ) ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ

ಆ) ಟೊಕಿಯೋ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ

ಇ) ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ

ಈ) ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ

ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ

ದೆಹಲಿಯ ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಏಷ್ಯಾ-ಫೆಸಿಫಿಕ್ ವಲಯದಲ್ಲಿ "ಇಂಗಾಲ ತಟಸ್ಥ" ವಿಮಾನ ನಿಲ್ದಾಣವೆಂಬ ಗೌರವಕ್ಕೆ ಪಾತ್ರವಾಗಿದೆ. ಅಲ್ಲದೇ ಈ ಹೆಗ್ಗಳಿಕೆಯನ್ನು ಪಡೆದುಕೊಂಡ ಏಷ್ಯಾ-ಫೆಸಿಫಿಕ್ ವಲಯದ ಮೊದಲ ವಿಮಾನ ನಿಲ್ದಾಣ ಸಹ ಆಗಿದೆ. ಈ ಸಂಬಂಧ ಕೆನಡಾದ ಮಾಂಟ್ರಿಯಲ್ ನಲ್ಲಿ ಅಂತಾರಾಷ್ಟ್ರೀಯ ವಿಮಾನನಿಲ್ದಾಣ ಮಂಡಳಿಯು ಪ್ರಮಾಣ ಪತ್ರವನ್ನು ನೀಡಿತು.

10. ಭಾರತದ "ಸಾಥಿಯನ್ ಜ್ಞಾನಶೇಖರನ್" ಯಾವ ಕ್ರೀಡೆಗೆ ಸಂಬಂಧಿಸಿದ್ದಾರೆ?

ಅ) ಕ್ರಿಕೆಟ್

ಆ) ಹಾಕಿ

ಇ) ಟೆನ್ನಿಸ್

ಈ) ಚೆಸ್

ಟೆನ್ನಿಸ್

ಚೆನ್ನೈ ಮೂಲದ ಸಾಥಿಯನ್ ಜ್ಞಾನಶೇಖರನ್ ಅವರು ಬೆಲ್ಜಿಯಂ ಓಪನ್ ಟೂರ್ನಿಯ ಪುರುಷರ ಸಿಂಗಲ್ಸ್ ನಲ್ಲಿ ಪ್ರಶಸ್ತಿ ಗೆದ್ದರು. ಆ ಮೂಲಕ ಅಚಂತ ಶರತ್ ಕಮಲ್ ನಂತರ ಈ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ಭಾರತದ ಎರಡನೇ ಆಟಗಾರ ಎಂಬ ಖ್ಯಾತಿ ಪಡೆದುಕೊಂಡರು.

www.karunaduexams.com

www.karunaduexams.com